

ಎಡದಿಂದ ಬಲಕ್ಕೆ:

1. ಅಧ್ಯಯನಕ್ಕೆ ಲಭ್ಯವಿರುವ ಈ ಸೌಲಭ್ಯ ತುಂಬ ನವೀನ (4)
3. ದೂರ ದೂರಿನ ದುಸ್ಥಿತಿಯನ್ನು ಸರಿಪಡಿಸಿದ್ದು (3)
4. ರಜೆ ನೀಡುವ ದಿನ ಕಂಡದ್ದು ಇದೇ ತಾವರೆ (3)
6. ಕೈಗೆ ಬಾಲ ತಾಗಿದೊಡನೆ ಖಡ್ಗವಾದೀತೇ? (4)
7. ವಿಷ ಸೇವಿಸಿ ಸತ್ತವನ ಶರೀರದ ಭಂಗಿ (4)
8. ಅಂತಹರ ಧ್ಯಾನ ಮಾಡಿದೊಡನೆಯೇ ಮಾಯ (4)
10. ಗೊತ್ತಾದ ಸಮಯ ಹೌದು. ಕಳೆದುಹೋದದ್ದೂ ಕೂಡ (4)
12. ಜವಾನನ ಜೊತೆಗೆ ಬೇಳೆ ಮಾಡಿಲ್ಲದ ಧಾನ್ಯ (4)
14. ಅಂಗರಾಗ ಮುಟ್ಟುವ ಮೊದಲು ಮಂಗಳ ಗ್ರಹ ನೋಡಿ (4)
16. ಗಾಬರಿಯಾದವ ತುಂಬ ಬಡವ (3)
17. ವಂದಿಸು ಎಂದರೆ ಕೊಂದು ಹಾಕು ಎಂದುಕೊಂಡನೇ? (3)
18. ರುಚಿಯನ್ನೇ ತುಂಬಿಕೊಂಡ ಬಾಳೆ–ಬೆಲ್ಲ ಮಿಶ್ರಣ (4)

ಮೇಲಿಂದ ಕೆಳಕ್ಕೆ:

1. ಆಸಕ್ತಿ ಏನೇ ಇರಲಿ, ಆತ ದೇವರಲ್ಲಿ ನಂಬಿಕೆ ಇರುವವ (3)
2. ಕಾರಲ್ಲಿ ನಡೆದ ಘಟನೆ– ತುಂಬ ಘೋರ (3)
3. ಶಾಸನವನ್ನೆಲ್ಲ ಧ್ವಂಸ ಮಾಡುತ್ತಿದ್ದ ದುರ್ಯೋಧನ ಸಹೋದರ (4)
5. ವಾರ್ತೆ ಏನೇ ಇರಲಿ, ಬರೀ ಒತ್ತಾಯ (3)
7. ತುಂಬ ಸರಾಗ–ಬಾಣದಷ್ಟು ಬೇಗ (4)
9. ನರಳಾಟ ಕೇಳಿಸಿದಾಗ ನಡುರಾತ್ರಿಯಾಗಿತ್ತು (4)
11. ಕಳ್ಳರಿಗೇ ಶುರುವಾಯಿತು ಯುದ್ಧ (3)
13. ಮಳೆ ಬರಿಸು, ನೀರಲ್ಲಿ ಮರೆಯಾಗುವಂತೆ ಮಾಡು (4)
14. ಅಂಬಾರಿ ಹತ್ತಲು ತಕ್ಕ ಬಟ್ಟೆ ನೋಡಿ (3)
15. ಕೋವಿಯನ್ನ ಕುರಿತ ಪದ್ಯ (3)

## ಪದಬಂಧ : 29-10-2009ರ ಉತ್ತರಗಳು

ಎಡದಿಂದ ಬಲಕ್ಕೆ: 1. ಸಂತಸ; 3. ವಿದಾಯ; 4. ತಬಲ; 6. ಆವರಣ; 7. ಪರಿವಾರ; 9. ಯಕ್ಷಪ್ರಶ್ನೆ; 11. ಜಾಯಿಕಾಯಿ; 15. ದಕ್ಷಿಣ; 16. ರಿಕಬ (‘ಬಕರಿ’ ಹಿಂದು ಮುಂದು); 17. ಕರಿದು.

ಮೇಲಿಂದ ಕೆಳಕ್ಕೆ: 1. ಸಂಯಮ; 2. ಸತತ; 3. ವಿಕಾರ; 5 ಲಹರಿ; 6. ಆಲಯ; 8. ರಜಾಯಿ; 10. ಪ್ರಮಾದ; 12. ‘ಯಿಡಾಬ’ (ಬಡಾಯಿ ತಲೆಕೆಳಗು); 13. ಅಣಕ; 14. ಬರಿದು.

# ಪ್ರಾಣಿ ಪ್ರಪಂಚ

## ‘ಆನೆಯ ಸೊಂಡಿಲು’– ಏನು ವಿಶೇಷ?

‘ಸೊಂಡಿಲು’– ಅದು ಆನೆಯ ಅತಿ ವಿಶಿಷ್ಟ ಅಂಗ. ಮೂಗು ಮತ್ತು ಮೇಲ್ತುಟಿಗಳ ಸಂಕರವಾದ ಈ ಅಂಗಳದಲ್ಲಿ ಎಲುಬು ಒಂದೂ ಇಲ್ಲ. ಐವತ್ತು ಸಾವಿರ ಸ್ನಾಯುಗಳು (ಮಾಂಸಖಂಡಗಳು), ಹೇರಳ ನರಗಳು, ರಕ್ತನಾಳಗಳು ಕಿಕ್ಕಿರಿದು ರೋಮಭರಿತ ಗಡಸು ಚರ್ಮದಿಂದ ಆವರಿಸಲ್ಪಟ್ಟಿರುವ ಸೊಂಡಿಲಿನದು ಸುಕ್ಕುಸುಕ್ಕಾದ ಬಾಹ್ಯರೂಪ; ಭಾರೀ ಕೊಳವೆಯಂಥ ಸ್ವರೂಪ. ಮುಖದಿಂದ ಇಳಿದು ನೆಲ ಮುಟ್ಟುವಷ್ಟು ಉದ್ದನಾದ ಈ ಅಂಗದ ತುದಿಯಲ್ಲಿ ಏಷಿಯದ ಆನೆಗಳಿಗೆ ಒಂದು ‘ಬೆರಳು’; ಆಫ್ರಿಕನ್ ಪ್ರಭೇದಗಳಿಗೆ ಎದುರುಬದುರಾದ ಎರಡು ಬೆರಳುಗಳು. ಅಷ್ಟೊಂದು ಸ್ನಾಯುಗಳಿಂದ ನರಗಳಿಂದ ಸಂಯೋಜಿತವಾಗಿರುವುದರಿಂದಲೇ ಆನೆಯ ಸೊಂಡಿಲಿಗೆ ಬಳುಕುವ ಸುತ್ತಿಕೊಳ್ಳುವ ಅದ್ಭುತ ಶಕ್ತಿ; ನೆಲದ ಮೇಲಿಟ್ಟ ನಾಣ್ಯವನ್ನೂ ಹಿಡಿದೆತ್ತಬಲ್ಲ ಕೌಶಲ್ಯ; ಅತಿಸೂಕ್ಷ್ಮ ಸ್ಪರ್ಶ ಸಂವೇದನಾ ಸಾಮರ್ಥ್ಯ ಕೂಡ.

ವಾಸ್ತವ ಏನೆಂದರೆ ಈಗ್ಗೆ ಐವತ್ತು ದಶಲಕ್ಷ ವರ್ಷ ಹಿಂದೆ ಅವತರಿಸಿದ ಆನೆ ವಂಶ ‘ಪ್ರೋಬೋ ಸೀಡಿಯೇ’ಯ ವಿಶೇಷ ಲಕ್ಷಣವೇ ಈ ಉದ್ದನ್ನ ‘ಮೂಗು’ (ಪ್ರೋಬೋಸಿಸ್). ಆದರೆ ಈ ವರ್ಗದ ಪ್ರಪ್ರಥಮ ಆನೆ ಪಿತಾಮಹ ‘ಮೊಯೆರಿಥೀರಿಯಂ’ನ ಸೊಂಡಿಲು ಉದ್ದದಲ್ಲಾಗಲೀ ನಿರ್ಮಿತಿಯಲ್ಲಾಗಲೀ ಈಗಿನ ಆನೆ ಸೊಂಡಿಲಿಗೆ ಹೋಲುವಂತಿರಲಿಲ್ಲ. ಮುಂದೆ ಮುಂದೆ ಆನೆ ಪ್ರಭೇದಗಳು ಅಭಿವರ್ಧನೆಗೊಂಡಂತೆಲ್ಲ, ಹೊಸ ಹೊಸ ಪ್ರಭೇದಗಳು ವಿಕಸನಗೊಂಡಂತೆಲ್ಲ ಜೊತೆ ಜೊತೆಗೇ ಸೊಂಡಿಲು ಕೂಡ ರಚನೆಯಲ್ಲಿ ಸಂಕೀರ್ಣಗೊಳ್ಳುತ್ತ, ಉಪಯೋಗದಲ್ಲಿ ಉತ್ತಮೋತ್ತಮಗೊಳ್ಳುತ್ತ ಈಗಿನ ‘ಎಲಿಫಾಸ್’ (ಏಷಿಯನ್ ಪ್ರಭೇದಗಳು) ಮತ್ತು ‘ಲೋಕ್ಸೋಡಾಂಟಾ’ (ಆಫ್ರಿಕನ್ ಪ್ರಭೇದಗಳು)ಗಳಲ್ಲಿ ಪ್ರಸ್ತುತದ ಬಹೂಪಯೋಗೀ ಸ್ವರೂಪ ಪಡೆದಿವೆ.



ಆನೆಗೆ ಸೊಂಡಿಲು ಅತ್ಯವಶ್ಯ, ಅತ್ಯುಪಯುಕ್ತ. ಎಷ್ಟೆಂದರೆ ಸೊಂಡಿಲು ಕತ್ತರಿಸಿದ ಆನೆಗೆ ಆಹಾರ–ನೀರು ಇಲ್ಲದ ಮರಣ ಖಚಿತ. ಆನೆ ಅದರ ಆಹಾರವಾದ ಹುಲ್ಲು ಸೊಪ್ಪು ಕೀಳಲು, ವೃಕ್ಷ ತೊಗಟೆ ಹರಿಯಲು, ರೆಂಬೆ–ಎಲೆ ಮುರಿಯಲು, ನೀರು ಹೀರಲು... ಅದನ್ನೆಲ್ಲ ಬಾಯಿಗೆ ತಲುಪಿಸಲು ಸೊಂಡಿಲೇ ಏಕೈಕ ಸಾಧನ. ಉಸಿರಾಡಲು, ವಾಸನೆಗಳನ್ನು ಗ್ರಹಿಸಲು, ಸಹಚರರನ್ನು ಸ್ನೇಹದಿಂದ ಸ್ಪರ್ಶಿಸಲು, ಭಾವಗಳನ್ನು ಅಭಿವ್ಯಕ್ತಿಸಲು, ಎದುರಾಳಿಗಳನ್ನು ತಳ್ಳಲು–ಒತ್ತರಿಸಲು, ಶತ್ರುಗಳನ್ನು ಹಿಡಿಯಲು– ಅಪ್ಪಳಿಸಲು, ಘೀಳಿಡಲು, ಮೈಗೆ ಧೂಳೆರಚಿಕೊಳ್ಳಲು, ನೀರೆರಚಿಕೊಳ್ಳಲು... ಹಾಗೆಲ್ಲ ಸೊಂಡಿಲಿನದು ಎಣೆಯಿಲ್ಲದಷ್ಟು ವಿಧಗಳ ಉಪಯೋಗ. ಅದಕ್ಕೆಲ್ಲ ಒಪ್ಪವಾಗುವಂಥ ಸಮರ್ಥ ಅಂಗವಾಗಿರುವುದೇ ಆನೆಯ ಸೊಂಡಿಲಿನ ವೈಶಿಷ್ಟ್ಯ.

ಎಂಥ ಅದ್ಭುತ ಅಂಗ! ಅಲ್ಲವೇ?

■ ಎನ್. ವಾಸುದೇವ್